Government of Karnataka

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
DEPARTMENT OF STATE EDUCATIONAL RESEARCH AND TRAINING
No 4, 100 FT RING ROAD, BANASHANKARI 3 RD STAGE BENGALURU - 560 085
Email: dpi dsert-ka@nic.in Website: http://dsert.kar.nic.in

Phone - 080 26980100
Fax - 080 26422377

ಸಂಖ್ಯೆ: ಡಿ.ಎಸ್.ಇ.ಆರ್.ಟಿ/ಇವಿಜಿ/ಪಿ.ಪ.ಕು/72/2018-19 ದಿನಾಂಕ: 18-01-2021

## ಸುತ್ತೋಲೆ

ವಿಷಯ: ಕೋವಿಡ್-19 ಹಿನ್ನೆಲೆಯಲ್ಲಿ 1 ನೇ ತರಗತಿಯಿಂದ 10ನೇ ತರಗತಿಯವರೆಗೆ 2020-21ನೇ ಶೈಕ್ಷಣಿಕ ಸಾಲಿಗೆ ಪಠ್ಯವಸ್ತು , ಪರೀಕ್ಷೆಗಳು ಮತ್ತು ಮೌಲ್ಯಮಾಪನ ತಂತ್ರವನ್ನು ಅಳವಡಿಸುವ ಕುರಿತು.

ಉಲ್ಲೇಖ: 1) ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ ಇವರ ಸುತ್ತೋಲೆ ಸಂಖ್ಯೆ ಸಶಿಕ/ವಿದ್ಯಾಗಮ/ಅ/ 13497/20-21 ದಿ: 4.8.2020

2) ಆಯುಕ್ತರ ಸುತ್ತೋಲೆ ಸಂಖ್ಯೆ: ಸಿ4(6) ಸ.ಪ್ರಾ.ಶಾ/ಶಾ.ಪ್ರಾ/23/2020-21 ದಿ: 23.12.2020

---

2020-21ನೇ ಶೈಕ್ಷಣಿಕ ಸಾಲಿನಲ್ಲಿ ಕೋವಿಡ್-19 ರ ಪರಿಣಾಮವಾಗಿ ಶೈಕ್ಷಣಿಕ ಅವಧಿ ಬದಲಾದ ಹಿನ್ನೆಲೆಯಲ್ಲಿ ಲಭ್ಯ ಅವಧಿಯಲ್ಲಿ ನಿರ್ವಹಿಸಬೇಕಾದ ಶೈಕ್ಷಣಿಕ ಕಾರ್ಯ ಚಟುವಟಿಕೆಗಳ ಬಗ್ಗೆ ಶಾಲೆಗಳಿಗೆ ಸೂಕ್ತ ಮಾರ್ಗದರ್ಶನ ನೀಡುವ ಉದ್ದೇಶದಿಂದ ಈ ಕೆಳಗಿನ ಅಂಶಗಳನ್ನು ಅನುಷ್ಠಾನಗೊಳಿಸಲು ಪಠ್ಯವಸ್ತು ಪರೀಕ್ಷೆಗಳು ಮತ್ತು ಮೌಲ್ಯಮಾಪನ ಮಾರ್ಗಸೂಚಿಯನ್ನು ನೀಡಲಾಗಿದೆ.

ರಾಜ್ಯದ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಖಾಸಗಿ ಶಾಲೆಗಳಲ್ಲಿ ರಾಜ್ಯ ಪಠ್ಯಕ್ರಮ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಬೋಧನಾ ಕಲಿಕಾ ಪ್ರಕ್ರಿಯೆಯು ವಿವಿಧ ಹಂತದಲ್ಲಿ ಅಂದರೆ ವಿದ್ಯಾಗಮ, ಆನ್ ಲೈನ್ ಶಿಕ್ಷಣ, ಸಂವೇದ-ವಿಡಿಯೋ ಪಾಠ, ಯು ಟ್ಯೂಬ್, ಇತರೆ ಕಾರ್ಯಕ್ರಮಗಳ ಮುಖೇನ ಬೋಧನೆ/ಮಾರ್ಗದರ್ಶನ ನೀಡಲಾಗಿದೆ/ನೀಡಲಾಗುತ್ತಿದೆ. ಜನವರಿ 2021 ರಿಂದ 10 ನೇ ತರಗತಿಗೆ ಶಾಲೆ ಪ್ರಾರಂಭವಾಗಿದ್ದು, 6 ರಿಂದ 9 ನೇ ತರಗತಿಗಳಿಗೆ ವಿದ್ಯಾಗಮ 2 ನ್ನು ಶಾಲಾ ವ್ಯವಸ್ಥೆಯಲ್ಲಿ ನಡೆಸಲಾಗುತ್ತಿದೆ. ಈ ಅವಧಿಯಲ್ಲಿ ಗಳಿಸಿದ ಕಲಿಕಾ ಅಂಶಗಳನ್ನು ಆಧರಿಸಿ ಪರೀಕ್ಷೆ ಗಳನ್ನು ಮತ್ತು ಮೌಲ್ಯಮಾಪನ ಮಾಡಲು ಈ ಕೆಳಕಂಡಂತೆ ಕ್ರಮವಹಿಸಲು ಸೂಚಿಸಿದೆ.

### 1 ರಿಂದ 5ನೇ ತರಗತಿಗಳಿಗೆ ನಿರ್ವಹಿಸಬೇಕಾದ ಪಠ್ಯವಸ್ತು, ಪರೀಕ್ಷೆ ಮತ್ತು ಮೌಲ್ಯಮಾಪನ ಪ್ರಕ್ರಿಯೆ:

#### ಪಠ್ಯವಸ್ತು ನಿರ್ವಹಣೆ ಕುರಿತು:

- ಪ್ರಸ್ತುತ ಶೈಕ್ಷಣಿಕ ಸಾಲಿನಲ್ಲಿ ಲಭ್ಯ ಬೋಧನಾ ಅವಧಿಗಳನ್ನು ಆಧರಿಸಿ ನೀಡಿದ್ದ ಪರ್ಯಾಯ ಶೈಕ್ಷಣಿಕ ಯೋಜನೆಯ ಸಾಮರ್ಥ್ಯಾಧಾರಿತ ಪಠ್ಯವಸ್ತುವಿನಂತೆ ವಿದ್ಯಾಗಮ ಕಾರ್ಯಕ್ರಮದಲ್ಲಿ, ಪರ್ಯಾಯ ಶೈಕ್ಷಣಿಕ ಯೋಜನೆಯಲ್ಲಿ ಶಿಕ್ಷಕರು ನಿರ್ವಹಿಸಿರುವ /ನಿರ್ವಹಿಸುವ ಬೋಧನಾ ಕಲಿಕಾ ಪ್ರಕ್ರಿಯೆ , ದೂರದರ್ಶನದ ಮೂಲಕ ಬಿತ್ತರಿಸುವ ಪಾಠಗಳು/ ಚಟುವಟಿಕೆಗಳು, ಮನೆಯಲ್ಲಿ ಮಕ್ಕಳು ನಿರ್ವಹಿಸಿದ ಚಟುವಟಿಕೆಗಳನ್ನು ಆಧರಿಸಿದೆ.

#### ಪರೀಕ್ಷೆ ಮತ್ತು ಮೌಲ್ಯಮಾಪನ ನಿರ್ವಹಣೆ ಕುರಿತು:

- ಮುಂಬರುವ ದಿನಗಳಲ್ಲಿ 1 ರಿಂದ 5 ನೇ ತರಗತಿಗಳಿಗೆ ಈ ಹಿಂದೆ ನಿರ್ವಹಿಸಿದ ವಿದ್ಯಾಗಮ ಮತ್ತು ಆನ್ ಲೈನ್ ಶಿಕ್ಷಣ (ಅನ್ವಯವಾಗುವ ತರಗತಿಗೆ) ಮತ್ತು ಶಾಲೆಯು ಪ್ರಾರಂಭಗೊಂಡ ನಂತರ ಶೈಕ್ಷಣಿಕ ಅವಧಿಗೆ ಲಭ್ಯವಾಗುವ ಬೋಧನ ಅವಧಿಗಳಿಗನುಸಾರವಾಗಿ 1 ರೂಪಣಾತ್ಮಕ ಮೌಲ್ಯಮಾಪನ ಹಾಗೂ 1 ಸಂಕಲನಾತ್ಮಕ ಮೌಲ್ಯಮಾಪನ ಕೈಗೊಳ್ಳುವುದು.

- ಭಾಗ-ಬಿಯಲ್ಲಿನ ವಿಷಯದಲ್ಲಿ ಕೋವಿಡ್-19ರ ಮಾರ್ಗಸೂಚಿ ಅನ್ವಯ ಸುರಕ್ಷಿತ ಕ್ರಮವನ್ನು ಅನುಸರಿಸಿ ಚಟುವಟಿಕೆಗಳನ್ನು ಕೈಗೊಳ್ಳುವುದು.

6 <u>ರಿಂದ 9ನೇ ತರಗತಿಗಳಿಗೆ ನಿರ್ವಹಿಸಬೇಕಾದ ಪಠ್ಯವಸ್ತು, ಪರೀಕ್ಷೆಗಳು ಮತ್ತು ಮೌಲ್ಯಮಾಪನ ಪ್ರಕ್ರಿಯೆ:</u>

<u>ಪಠ್ಯವಸ್ತು ನಿರ್ವಹಣೆ ಕುರಿತು:</u>

- ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಶಾಲೆಗಳನ್ನು ನಿಗದಿತ ಅವಧಿಯಲ್ಲಿ ಪ್ರಾರಂಭಿಸಲು ಸಾಧ್ಯವಾಗದ ಕಾರಣ ಮಕ್ಕಳ ಶಾಲಾ ಔಪಚಾರಿಕ ಕಲಿಕೆಯಲ್ಲಿ ಉಂಟಾದ ಕಲಿಕಾ ಅಂತರವನ್ನು ಸರಿದೂಗಿಸಲು 6 ರಿಂದ 9ನೇ ತರಗತಿವರೆಗೆ ವಾರ್ಷಿಕ ಪಠ್ಯ ಚಟುವಟಿಕೆಗಾಗಿ ಪರ್ಯಾಯ ಮಾರ್ಗಗಳನ್ನು ಅಳವಡಿಸಲು ಪರ್ಯಾಯ ಶೈಕ್ಷಣಿಕ ಕ್ಯಾಲೆಂಡರನ್ನು (Alternative Academic-calender)ಸಿದ್ಧಪಡಿಸಿದೆ

- ಈಗಾಗಲೇ ವಿದ್ಯಾಗಮ ತರಗತಿಗಳಿಗೆ ಲಭ್ಯ ಅವಧಿಗಳಲ್ಲಿ ನಿಗದಿತ ಪಠ್ಯವನ್ನು ಬೋಧಿಸಲು ಸಾಧ್ಯವಾಗದ ಕಾರಣ ಲಭ್ಯ ಕಲಿಕಾ ಸಮಯವನ್ನು ಬಳಸಿ ನಿರ್ದಿಷ್ಟ ತರಗತಿಗಳ ಕಲಿಕಾಂಶಗಳನ್ನು ಮತ್ತು ಮುಂದಿನ ತರಗತಿಗಳಿಗೆ ಅಗತ್ಯವಿರುವ ಕಲಿಕಾಂಶಗಳ ಜೋಡಣೆಯನ್ನು ಮಾಡಿ ಅದರನ್ವಯ ಕಲಿಕಾ ಸಾಮರ್ಥ್ಯಗಳನ್ನು ಗುರುತಿಸಲಾಗಿದೆ. ಗುರುತಿಸಲಾಗಿರುವ ಕಲಿಕಾ ಸಾಮರ್ಥ್ಯಗಳನ್ನು ಪಠ್ಯ ವಸ್ತುವಿಗೆ ಅನುಗುಣವಾಗಿ ಹೊಂದಿಸಿ ಪರ್ಯಾಯ ಶೈಕ್ಷಣಿಕ ಯೋಜನೆಯನ್ನು ಸಿದ್ಧಪಡಿಸಲಾಗಿದೆ. ಶಿಕ್ಷಕರು ಪಠ್ಯವಸ್ತುವಿಗೆ ಅನುಗುಣವಾಗಿ ಕಲಿಕಾ ಸಾಮರ್ಥ್ಯಗಳನ್ನು ವಿದ್ಯಾರ್ಥಿಗಳ ಕಲಿಕೆಗೆ ಅನುಕೂಲಿಸಲು ಕ್ರಮ ವಹಿಸುವುದು.
- ತರಗತಿಗಳಿಗೆ ಸಂಬಂಧಪಟ್ಟ ಪಠ್ಯವಸ್ತು ಆಧಾರಿತ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ಅಭ್ಯಾಸ ಹಾಳೆಗಳನ್ನು ನೀಡಲಾಗಿದೆ. ವಿದ್ಯಾರ್ಥಿಗಳನ್ನು ಕಲಿಕಾ ಪ್ರಕ್ರಿಯೆಯಲ್ಲಿ ತೊಡಗಿಸಿ ನಿರಂತರ ಮೇಲ್ವಿಚಾರಣೆ/ ಮಾರ್ಗದರ್ಶನ ನೀಡುತ್ತಾ ವಿದ್ಯಾರ್ಥಿಗಳ ಕಲಿಕೆ ದೃಢಗೊಳಿಸುವುದು.
- ಒಟ್ಟಾರೆಯಾಗಿ ತರಗತಿ 1ರಿಂದ 9ನೇ ತರಗತಿವರೆಗಿನ ಪಠ್ಯವಸ್ತುವಿನಲ್ಲಿ ಲಭ್ಯ ಬೋಧನಾ ಅವಧಿಗಳನ್ನು ಆಧರಿಸಿ/ ಬೋಧನಾ ಕಲಿಕಾ ಪ್ರಕ್ರಿಯೆ ನಿರ್ವಹಿಸುವುದು. ಪ್ರಸಕ್ತ ಶೈಕ್ಷಣಿಕ ಅವಧಿಯಲ್ಲಿ ಬೋಧಿಸಿದ ಪಠ್ಯವಸ್ತುವಿನ ಮೇಲೆ ಶಾಲಾ ಹಂತದಲ್ಲಿ ಪರೀಕ್ಷೆ ಮತ್ತು ಮೌಲ್ಯಮಾಪನ ಕಾರ್ಯ ನಿರ್ವಹಿಸುವುದು.

<u>ಪರೀಕ್ಷೆಗಳು ಮತ್ತು ಮೌಲ್ಯಮಾಪನ ನಿರ್ವಹಣೆ ಕುರಿತು:</u>

- ವಿದ್ಯಾಗಮ ಕಾರ್ಯಕ್ರಮದಡಿಯಲ್ಲಿ ಪರ್ಯಾಯ ಶೈಕ್ಷಣಿಕ ಯೋಜನೆಯಲ್ಲಿ ಶಿಕ್ಷಕರು ತರಗತಿಯಲ್ಲಿ ಮಾಡಿರುವ/ ಮಾಡುತ್ತಿರುವ ಬೋಧನೆ, ದೂರದರ್ಶನದ ಮೂಲಕ ಬಿತ್ತರಿಸಿರುವ ಸಂವೇದ ವಿಡಿಯೋ ಪಾಠಗಳು, ವಿದ್ಯಾರ್ಥಿಯು ಮನೆಯಲ್ಲಿ ನಿರ್ವಹಿಸಿರುವ ಚಟುವಟಿಕೆಗಳು, ಶಿಕ್ಷಕರು ವಿದ್ಯಾರ್ಥಿಗಳಿಗೆ ನೀಡಿದ್ದ ಅಭ್ಯಾಸ ಹಾಳೆಗಳು, ಯೋಜನಾ ಕಾರ್ಯಗಳು ಮತ್ತು ಇನ್ಯಾವುದೇ ಕಲಿಕಾ ಅವಕಾಶಗಳನ್ನು ಆಧರಿಸಿ ತರಗತಿವಾರು ಸಾಮರ್ಥ್ಯಗಳ ಆಧಾರದ ಮೇಲೆ ರೂಪಣಾತ್ಮಕ ಮತ್ತು ಸಂಕಲನಾತ್ಮಕ ಮೌಲ್ಯಮಾಪನ ಕಾರ್ಯವನ್ನು ನಿರ್ವಹಿಸುವುದು.
- ಯಾವುದೇ ಶಾಲೆಯಲ್ಲಿ ಆನ್‌ಲೈನ್ ತರಗತಿಗಳು ನಡೆಸಿ ಈಗಾಗಲೇ 1, 2, 3 ಅಥವ 4ನೇ ರೂಪಣಾತ್ಮಕ ಮೌಲ್ಯಮಾಪನಗಳನ್ನು ಪೂರಕ ಸಿ.ಸಿ.ಇ. ಚಟುವಟಿಕೆಗಳಾದ ಘಟಕ ಪರೀಕ್ಷೆ / ಇತರೆ ಚಟುವಟಿಕೆಗಳು ನಿರ್ವಹಿಸಿದ್ದಲ್ಲಿ ಅವುಗಳಲ್ಲಿ ವಿದ್ಯಾರ್ಥಿಯು ಅತ್ಯುತ್ತಮವಾಗಿ ಸಾಧನೆ ಮಾಡಿರುವ ಯಾವುದಾದರೂ 2 ರೂಪಣಾತ್ಮಕ ಮೌಲ್ಯಮಾಪನಗಳ ಸಾಧನೆಯನ್ನು ಮಾತ್ರ ಪರಿಗಣಿಸುವುದು. ನಿರ್ವಹಿಸದಿದ್ದಲ್ಲಿ ಪ್ರಸ್ತುತ ಶೈಕ್ಷಣಿಕ ಅವಧಿಯೊಳಗೆ ಮುಂದಿನ ಪುಟದಲ್ಲಿ ನೀಡಿರುವ ಕೋಷ್ಟಕದಂತೆ ನಿರ್ವಹಿಸಿರುವುದನ್ನು ಪರಿಗಣಿಸುವುದು.
- ಭಾಗ-ಬಿಯಲ್ಲಿನ ವಿಷಯಗಳಿಗೆ ಸಂಬಂಧಿಸಿದಂತೆ ರೂಪಣಾತ್ಮಕ ಮತ್ತು ಸಂಕಲನಾತ್ಮಕ ಮೌಲ್ಯಮಾಪನವನ್ನು ನಿರ್ವಹಿಸಲು, ಕೋವಿಡ್-19ರ ಮಾರ್ಗಸೂಚಿ ಅನುಸಾರ ಹಾಗೂ ವಿದ್ಯಾರ್ಥಿಗಳ ಆರೋಗ್ಯದ ಹಿತ ದೃಷ್ಟಿಯಿಂದ ಗುಂಪು ಚಟುವಟಿಕೆಗಳನ್ನು ಹೊರತುಪಡಿಸಿ ಸೂಕ್ತವೆನಿಸಿದ ಯಾವುದೇ 1 ರೂಪಣಾತ್ಮಕ ಪರೀಕ್ಷೆ ಮತ್ತು 1 ಸಂಕಲನಾತ್ಮಕ ಪರೀಕ್ಷೆಯನ್ನು ನೀಡಿ ಮಕ್ಕಳ ಪ್ರಗತಿಯನ್ನು ದಾಖಲಿಸುವುದು

- 6 ರಿಂದ 9 ನೇ ತರಗತಿಗಳಿಗೆ 2 ರೂಪಣಾತ್ಮಕ ಮೌಲ್ಯಮಾಪನ (ಈಗಾಗಲೇ ನಿರ್ವಹಿಸಿದ್ದಲ್ಲಿ, ಅದನ್ನೇ ಪರಿಗಣಿಸುವುದು ನಿರ್ವಹಿಸದಿದ್ದಲ್ಲಿ, ಕೆಳಕಂಡಂತೆ ಕ್ರಮ ವಹಿಸುವುದು) ಹಾಗೂ 1 ಸಂಕಲನಾತ್ಮಕ ಮೌಲ್ಯಮಾಪನ (ವಾರ್ಷಿಕ ಪರೀಕ್ಷೆ) ಅನ್ನು ಕೆಳಕಂಡಂತೆ ನಿರ್ವಹಿಸತಕ್ಕದ್ದು.

| | |
|---|---|
| ಮೊದಲನೇ ರೂಪಣಾತ್ಮಕ ಮೌಲ್ಯಮಾಪನ (10 ಅಂಕಗಳಿಗೆ) | ಫೆಬ್ರವರಿ 2021ರ ಮೂರನೇ ವಾರ |
| ಎರಡನೇ ರೂಪಣಾತ್ಮಕ ಮೌಲ್ಯಮಾಪನ (10 ಅಂಕಗಳಿಗೆ) | ಏಪ್ರಿಲ್ 2021 ನಾಲ್ಕನೇ ವಾರ |
| ಸಂಕಲನಾತ್ಮಕ ಮೌಲ್ಯಮಾಪನ ವಾರ್ಷಿಕ ಪರೀಕ್ಷೆ (30 ಅಂಕಗಳಿಗೆ) | ಮೇ 2021ರ ಕೊನೆಯ ವಾರದಿಂದ ಜೂನ್ ಮೊದಲನೇ ವಾರದವರೆಗೆ |
| ಫಲಿತಾಂಶ ಪ್ರಕಟಣೆ | ಜೂನ್ ಎರಡನೇ ವಾರ |

- ಈ ಹಿಂದಿನ ಶೈಕ್ಷಣಿಕ ವರ್ಷಗಳಲ್ಲಿ 6 ರಿಂದ 9ನೇ ತರಗತಿಗಳಿಗೆ 4 ರೂಪಣಾತ್ಮಕ ಹಾಗೂ 2 ಸಂಕಲನಾತ್ಮಕ ಮೌಲ್ಯಮಾಪನ ಮಾಡಿ ಉತ್ತೀರ್ಣ ಶ್ರೇಣಿಯನ್ನು ನಮೂದಿಸಲಾಗುತ್ತಿತ್ತು, ಪ್ರಸ್ತುತ ಶೈಕ್ಷಣಿಕ ಅವಧಿಯಲ್ಲಿ 2 ರೂಪಣಾತ್ಮಕ ಹಾಗೂ 1 ಸಂಕಲನಾತ್ಮಕ ಮೌಲ್ಯಮಾಪನ ನಿಗಧಿಪಡಿಸಿರುವುದರಿಂದ ಸದರಿ ಮೌಲ್ಯಮಾಪನದ ಅಂಕಗಳನ್ನು ದ್ವಿಗುಣಗೊಳಿಸಿ ಶ್ರೇಣಿ ನಮೂದಿಸುವುದು.

## 10ನೇ ತರಗತಿಗಳಿಗೆ ನಿರ್ವಹಿಸಬೇಕಾದ ಮೌಲ್ಯಮಾಪನ ಪ್ರಕ್ರಿಯೆ:

### ಪಠ್ಯವಸ್ತು ನಿರ್ವಹಣೆ ಕುರಿತು:

ಈ ಕಛೇರಿಯಿಂದ ನೀಡಿದ ಪತ್ರ ಸಂಖ್ಯೆ: ಕ.ಪ.ಪ್ರ.ಸಂ/ಎಸ್.ಒ03/01/2020-21 ದಿ: 13.1.2021ರ ಪತ್ರದಲ್ಲಿ ಪ್ರಸಕ್ತ ಸಾಲಿನ ಬೋಧನಾ ಕಲಿಕೆ ಹಾಗೂ ಮೌಲ್ಯಮಾಪನಕ್ಕೆ ಗುರುತಿಸಿರುವ ವಿಷಯ/ಅಂಶಗಳನ್ನು ಅನುಷ್ಠಾನಕ್ಕಾಗಿ ನೀಡಿದ್ದು, ಅದರಂತೆ ಕ್ರಮ ವಹಿಸುವುದು.

### ಆಂತರಿಕ ಪರೀಕ್ಷೆಗಳು ಮತ್ತು ಮೌಲ್ಯಮಾಪನ ಕುರಿತು:

- ವಿದ್ಯಾಗಮ ಕಾರ್ಯಕ್ರಮದಡಿಯಲ್ಲಿ, ಪರ್ಯಾಯ ಶೈಕ್ಷಣಿಕ ಯೋಜನೆಯಲ್ಲಿ, ಶಿಕ್ಷಕರು ತರಗತಿಯಲ್ಲಿ ಮಾಡಿರುವ /ಮಾಡುತ್ತಿರುವ ಬೋಧನೆ, ದೂರದರ್ಶನದ ಮೂಲಕ ಬಿತ್ತರಿಸಿರುವ ಸಂವೇದ ವಿಡಿಯೋ ಪಾಠಗಳು, ವಿದ್ಯಾರ್ಥಿಯು ಮನೆಯಲ್ಲಿ ನಿರ್ವಹಿಸಿರುವ ಚಟುವಟಿಕೆಗಳು, ಶಿಕ್ಷಕರು ವಿದ್ಯಾರ್ಥಿಗಳಿಗೆ ನೀಡಿದ್ದ ಅಭ್ಯಾಸ ಹಾಳೆಗಳು, ಯೋಜನಾ ಕಾರ್ಯಗಳು ಮತ್ತು ಇನ್ನಾವುದೇ ಕಲಿಕಾ ಅವಕಾಶಗಳನ್ನು ಆಧರಿಸಿ ಪರೀಕ್ಷೆಗೆ ನಿಗಧಿಪಡಿಸಿದ್ದ ವಿಷಯವಾರು ಅಧ್ಯಾಯಗಳ ಮೇಲೆ ರೂಪಣಾತ್ಮಕ ಮತ್ತು ಸಂಕಲನಾತ್ಮಕ ಮೌಲ್ಯಮಾಪನ ಕಾರ್ಯವನ್ನು ನಿರ್ವಹಿಸುವುದು.
- ಯಾವುದೇ ಶಾಲೆಯಲ್ಲಿ ವಿದ್ಯಾಗಮ ಆನ್‌ಲೈನ್ ತರಗತಿಗಳನ್ನು ನಡೆಸಿ ಈಗಾಗಲೇ 1, 2, 3 ಅಥವ 4ನೇ ರೂಪಣಾತ್ಮಕ ಮೌಲ್ಯಮಾಪನಗಳನ್ನು / 8 ಪ್ರಾಜೆಕ್ಟ್ ವರ್ಕಗಳನ್ನು ನಿರ್ವಹಿಸಿದ್ದಲ್ಲಿ ಅವುಗಳಲ್ಲಿ ವಿದ್ಯಾರ್ಥಿಯು ಅತ್ಯುತ್ತಮವಾಗಿ ಸಾಧನೆ ಮಾಡಿರುವ ಯಾವುದಾದರೂ 2 ರೂಪಣಾತ್ಮಕ ಮೌಲ್ಯಮಾಪನಗಳ / ವಿಷಯವಾರು 04 ಪ್ರಾಜೆಕ್ಟ್ ವರ್ಕಗಳ ಸಾಧನೆಯನ್ನು ಮಾತ್ರ ಪರಿಗಣಿಸುವುದು, ನಿರ್ವಹಿಸದಿದ್ದಲ್ಲಿ ಪ್ರಸ್ತುತ ಶೈಕ್ಷಣಿಕ ಅವಧಿಯೊಳಗೆ ಮುಂದಿನ ಪುಟದಲ್ಲಿ ನೀಡಿರುವ ಕೋಷ್ಟಕದಂತೆ ನಿರ್ವಹಿಸಿ ಪರಿಗಣಿಸುವುದು.
- ಭಾಗ-ಬಿಯಲ್ಲಿನ ವಿಷಯಗಳಿಗೆ ಸಂಬಂಧಿಸಿದಂತೆ ರೂಪಣಾತ್ಮಕ ಮತ್ತು ಸಂಕಲನಾತ್ಮಕ ಮೌಲ್ಯಮಾಪನವನ್ನು ನಿರ್ವಹಿಸಲು, ಕೋವಿಡ್-19ರ ಮಾರ್ಗಸೂಚಿ ಅನುಸಾರ ಹಾಗೂ ವಿದ್ಯಾರ್ಥಿಗಳ ಆರೋಗ್ಯದ ಹಿತ ದೃಷ್ಟಿಯಿಂದ ಗುಂಪು ಚಟುವಟಿಕೆಗಳನ್ನು ಹೊರತುಪಡಿಸಿ ಸೂಕ್ತವೆನಿಸಿದ ಯಾವುದೇ 1 ಚಟುವಟಿಕೆಯನ್ನು ನೀಡಿ ಮಕ್ಕಳ ಪ್ರಗತಿಯನ್ನು ದಾಖಲಿಸುವುದು.

1. 10ನೇ ತರಗತಿಗೆ ಸಿ.ಸಿ.ಇ.ಅಡಿ ಆಂತರಿಕ ಮೌಲ್ಯಮಾಪನಕ್ಕೆ ನಿಗಧಿಪಡಿಸಿದ್ದ 04 ರೂಪಣಾತ್ಮಕ ಪರೀಕ್ಷೆ ಮತ್ತು ವಿಷಯವಾರು 8 ಪ್ರಾಜೆಕ್ಟ್ ಚಟುವಟಿಕೆಗಳನ್ನು ಕೋವಿಡ್-19ರ ಹಿನ್ನೆಲೆಯಲ್ಲಿ ಪ್ರಸಕ್ತ ಸಾಲಿಗೆ 02 ರೂಪಣಾತ್ಮಕ ಪರೀಕ್ಷೆ ಮತ್ತು ವಿಷಯವಾರು04 ಪ್ರಾಜೆಕ್ಟ್ ಚಟುವಟಿಕೆಗಳಿಗೆ ನಿಗಧಿಪಡಿಸಿದ್ದು, ಆಂತರಿಕವಾಗಿ ಪಡೆದ ಅಂಕಗಳನ್ನು ವಿದ್ಯಾರ್ಥಿಗಳಿಗೆ ಪ್ರಥಮ ಭಾಷೆ 25 ಉಳಿದ ವಿಷಯಗಳಿಗೆ 20 ಅಂಕಗಳಿಗೆ ಪರಿಗಣಿಸುವುದು
2. ಪೂರ್ವ ಸಿದ್ಧತಾ ಪರೀಕ್ಷೆಯನ್ನು ಕೆ.ಎಸ್.ಇ.ಇ.ಬಿ ಮಂಡಳಿ ನೀಡುವ ಮಾರ್ಗದರ್ಶನದಂತೆ ನಿರ್ವಹಿಸುವುದು

| | |
|---|---|
| ಮೊದಲನೇ ರೂಪಣಾತ್ಮಕ ಮೌಲ್ಯಮಾಪನ | ಫೆಬ್ರವರಿ 2021 ರ ಕೊನೆಯ ವಾರ |
| ಎರಡನೇ ರೂಪಣಾತ್ಮಕ ಮೌಲ್ಯಮಾಪನ | ಏಪ್ರಿಲ್ 2021 ರ ಮೂರನೇ ವಾರ |
| 4 ಪ್ರಾಜೆಕ್ಟ್ ಚಟುವಟಿಕೆಗಳು | ಜನವರಿಯಿಂದ ಏಪ್ರಿಲ್ ವರೆಗೆ ಮಾಹೆವಾರು/ ವಿಷಯವಾರು ತಲಾ ಒಂದರಂತೆ ನಿರ್ವಹಿಸುವುದು. |
| ಪೂರ್ವ ಸಿದ್ಧತಾ ಪರೀಕ್ಷೆ (ಕೆ.ಎಸ್.ಇ.ಇ.ಬಿ ಮಂಡಳಿ ನೀಡುವ ನಿರ್ದೇಶನದಂತೆ ) | ಮೇ 2021 ರ ಎರಡನೇ ವಾರ |

- ಒಟ್ಟಾರೆ ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಕೋವಿಡ್-19 ರ ಹಿನ್ನೆಲೆಯಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಪರಿಗಣಿಸಲಾಗಿರುವ ಪಠ್ಯಾಂಶಗಳನ್ನು ಬೋಧನೆ ಮಾಡಿ ಅವಶ್ಯವಾದ ಮೌಲ್ಯಮಾಪನ ಕಾರ್ಯ ಕೈಗೊಳ್ಳುವುದು.

ಮೇಲಿನ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಪರೀಕ್ಷೆಗಳನ್ನು ಮತ್ತು ಮೌಲ್ಯಮಾಪನ ಕಾರ್ಯವನ್ನು ಕೈಗೊಂಡು ಸೂಕ್ತ ಪೂರಕ ದಾಖಲೆಗಳನ್ನು ನಿರ್ವಹಿಸಲು ಸೂಚಿಸಿದೆ.

(ಅನ್ಬುಕುಮಾರ್)
ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ
ಬೆಂಗಳೂರು

ಇವರಿಗೆ,

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಹಾಗೂ ಉಪನಿರ್ದೇಶಕರು (ಅಭಿವೃದ್ಧಿ)ರವರಿಗೆ ಅಗತ್ಯ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಹಾಗೂ ಕ್ಷೇತ್ರ ಸಮನ್ವಯಾಧಿಕಾರಿಗಳಿಗೆ ಉಪನಿರ್ದೇಶಕರು (ಆಡಳಿತ) ರವರ ಮೂಲಕ ಅಗತ್ಯ ಕ್ರಮಕ್ಕಾಗಿ.

ಪ್ರತಿಯನ್ನು:

1. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ ರವರ ಆಪ್ತ ಕಾರ್ಯದರ್ಶಿಯವರಿಗೆ ಸಲ್ಲಿಸುತ್ತಾ, ಮಾನ್ಯ ಸಚಿವರ ಗಮನಕ್ಕೆ ತರಲು ಕೋರಿದೆ.
2. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರವರಿಗೆ ಗೌರವ ಪೂರ್ವಕವಾಗಿ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ , ನೃಪತುಂಗ ರಸ್ತೆ, ಬೆಂಗಳೂರು ರವರಿಗೆ ಗೌರವ ಪೂರ್ವಕವಾಗಿ ಅವಗಾಹನೆಗೆ ಸಲ್ಲಿಸಿದೆ.
4. ಅಪರ ಆಯುಕ್ತರು, ಸಾ.ಶಿ.ಇ ಧಾರವಾಡ ಆಯುಕ್ತಾಲಯ ಮತ್ತು ಕಲಬುರಗಿ ಸಾ.ಶಿ.ಇ ಕಲಬುರಗಿ ಆಯುಕ್ತಾಲಯ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
5. ರಾಜ್ಯದ ಎಲ್ಲಾ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಮಾಹಿತಿಗಾಗಿ
6. ಕಛೇರಿ ಪ್ರತಿ